**All India Radio: Bangalore**
**National Bulletin In Kannada**
**13.03.2026  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.03.2026  1.10 p.m.**

**<><><><>**

ಮುಖ್ಯಾಂಶಗಳು

1. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ ೨೨ನೇ ಕಂತು ಇಂದು ಬಿಡುಗಡೆ
2. ಅಸ್ಸಾಂನಲ್ಲಿಂದು ೪೭ ಸಾವಿರ ೮೦೦ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
3. 'ಮೊಂಥಾ' ಚಂಡಮಾರುತ ಪೀಡಿತ ರಾಜ್ಯಗಳಿಗೆ ಒಂದು ಸಾವಿರದ ೬೧೨ ಕೋಟಿ ರೂಪಾಯಿಗಳ ನೆರವು ಘೋಷಿಸಿದ ಕೇಂದ್ರ ಸರ್ಕಾರ
4. ಸಂಘರ್ಷ ತೊರೆದು, ಮಾತುಕತೆಗೆ ಮುಂದಾಗುವಂತೆ ಇರಾನ್, ಅಮೆರಿಕ, ಇಸ್ರೇಲ್‌ಗೆ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಒತ್ತಾಯ

<><><><>

ಪ್ರಧಾನಿ ನರೇಂದ್ರ ಮೋದಿ ಅವರು, ಅಸ್ಸಾಂನ ಗುವಾಹಟಿಯಲ್ಲಿ ಇಂದು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ ೨೨ನೇ ಕಂತನ್ನು ಬಿಡುಗಡೆ ಮಾಡಲಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಪ್ರಧಾನಿ ನರೇಂದ್ರ ಮೋದಿ ಅವರು ಸುಮಾರು ೯ ಕೋಟಿ ೩೨ ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆ ಮೂಲಕ ೧೮ ಸಾವಿರದ ೬೪೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ. ಈ ಯೋಜನೆಯಡಿ ಇದುವರೆಗೆ ರೈತರಿಗೆ ೪ ಲಕ್ಷ ೯ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣವನ್ನು ವರ್ಗಾಯಿಸಲಾಗಿದೆ. ಮುಂದಿನ ಕಂತಿನ ಬಿಡುಗಡೆಯೊಂದಿಗೆ ಒಟ್ಟು ಮೊತ್ತ ೪ ಲಕ್ಷ ೨೭ ಸಾವಿರ ಕೋಟಿ ರೂಪಾಯಿಗಳನ್ನು ಮೀರಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಎರಡು ದಿನಗಳ ಕಾಲ ಅಸ್ಸಾಂಗೆ ಭೇಟಿ ನೀಡಲಿದ್ದಾರೆ. ಭೇಟಿಯ ಸಮಯದಲ್ಲಿ ಅವರು, ೪೭ ಸಾವಿರ ೮೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ

ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ರಸ್ತೆ ಮೂಲಸೌಕರ್ಯ ಯೋಜನೆಯಾದ ಅಸ್ಸಾಂ ಮಾಲಾ ೩.೦ ಮತ್ತು ನಾಲ್ಕು ಮೇಲ್ಸೇತುವೆಗಳು ಹಾಗೂ ಬಿಟಿಸಿ ಪ್ರದೇಶಕ್ಕಾಗಿ ಎರಡು ಸೇತುವೆಗಳು ಸೇರಿದಂತೆ ೬ ರಸ್ತೆ ಯೋಜನೆಗಳಿಗೆ ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.  ಅಲ್ಲದೇ, ಕೊಕ್ರಜಾರ್‌ನಲ್ಲಿ ರೈಲ್ವೆ ಆವರ್ತಕ ಪರೀಕ್ಷಾ ಕಾರ್ಯಾಗಾರಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಹಾಗೂ ಮೂರು ಹೊಸ ರೈಲುಗಳಾದ ಕಾಮಾಖ್ಯ-ಚಾರ್ಲಪಲ್ಲಿ ಅಮೃತ್ ಭಾರತ್ ಎಕ್ಸ್‌ಪ್ರೆಸ್; ಗುವಾಹಟಿ-ನ್ಯೂ ಜಲ್‌ಪೈಗುರಿ ಎಕ್ಸ್‌ಪ್ರೆಸ್ ಮತ್ತು ನಾರಂಗಿ-ಅಗರ್ತಲಾ ಎಕ್ಸ್‌ಪ್ರೆಸ್‌ಗೆ ಹಸಿರು ನಿಶಾನೆ ತೋರಲಿದ್ದಾರೆ. ಗುವಾಹಟಿಗೆ ಪ್ರಯಾಣಿಸುವ ಮೊದಲು ಪ್ರಧಾನಿಯವರು ಕೊಕ್ರಜಾರ್‌ನಲ್ಲಿ ಬೃಹತ್ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಗುವಾಹಟಿಯಲ್ಲಿ, ಪ್ರಧಾನಿಯವರು, ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ.  ಪ್ರಧಾನಿ ಅವರು ನಾಳೆ, ಸಿಲ್ಚಾರ್‌ನಲ್ಲಿ ೨೩ ಸಾವಿರದ ೫೫೦ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು, ಕಳೆದ ವರ್ಷ ಮೊಂಥಾ ಚಂಡಮಾರುತದಿಂದಾಗಿ ಭೂಕುಸಿತ, ಪ್ರವಾಹದಿಂದಾಗಿ ಹಾನಿಗೊಳಗಾದ ಆಂಧ್ರಪ್ರದೇಶ, ಚತ್ತೀಸ್‌ಗಢ, ಗುಜರಾತ್, ಹಿಮಾಚಲಪ್ರದೇಶ, ನಾಗಾಲ್ಯಾಂಡ್ ಹಾಗು ಜಮ್ಮು-ಕಾಶ್ಮೀರಕ್ಕೆ ಒಂದು ಸಾವಿರದ ೯೧೨ ಕೋಟಿ ರೂಪಾಯಿಗಳ ನೆರವನ್ನು ಅನುಮೋದಿಸಿದೆ. ಒಟ್ಟು ಅನುದಾನದಲ್ಲಿ ಆಂಧ್ರಪ್ರದೇಶಕ್ಕೆ ೩೪೧ ಕೋಟಿ ರೂಪಾಯಿ, ಚತ್ತೀಸ್‌ಗಢಕ್ಕೆ ೧೫.೭೦ ಕೋಟಿ ರೂಪಾಯಿ, ಗುಜರಾತ್‌ಗೆ ೭೮೮ ಕೋಟಿ ರೂಪಾಯಿ, ಹಿಮಾಚಲಪ್ರದೇಶಕ್ಕೆ ೨೮೮ ಕೋಟಿ ರೂಪಾಯಿ, ನಾಗಾಲ್ಯಾಂಡ್‌ಗೆ ೧೫೮ ಕೋಟಿ ರೂಪಾಯಿ ಹಾಗೂ ಜಮ್ಮು ಮತ್ತು ಕಾಶ್ಮೀರಕ್ಕೆ ೩೩೦ ಕೋಟಿ ರೂಪಾಯಿ ನೆರೆವು ಘೋಷಿಸಲಾಗಿದೆ. ೨೦೨೫-೨೬ನೇ ಹಣಕಾಸಿನ ವರ್ಷದಲ್ಲಿ ಕೇಂದ್ರ ಸರ್ಕಾರ, ರಾಜ್ಯ ವಿಪತ್ತು ನಿರ್ವಹಣಾ ನಿಧಿಯಡಿ ೨೮ ರಾಜ್ಯಗಳಿಗೆ ೨೦ ಸಾವಿರದ ೭೩೫ ಕೋಟಿ ರೂಪಾಯಿ ಹಾಗು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಡಿ ೨೧ ರಾಜ್ಯಗಳಿಗೆ ೩ ಸಾವಿರದ ೬೨೮ ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದೆ.

<><><><>

ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಳ್ಳುತ್ತಿರುವ ಬಿಕ್ಕಟ್ಟಿನ ಬಗ್ಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯಾ ಗುಟೆರೆಸ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಈ ಪರಿಸ್ಥಿತಿಯು ಜಾಗತಿಕ ಶಾಂತಿ ಮತ್ತು ಭದ್ರತೆಗೆ ದೊಡ್ಡ ಸವಾಲಾಗಿದೆ ಎಂದು ಅವರು ಎಚ್ಚರಿಸಿದ್ದಾರೆ. ಈ ಸಂಘರ್ಷವು ನಾಗರಿಕರಿಗೆ ಅಪಾರ ಸಾವು-ನೋವು ಮತ್ತು ಸಂಕಷ್ಟಗಳನ್ನು ತಂದೊಡ್ಡಿದೆ. ಎರಡೂ ಕಡೆಯವರು ಸಂಘರ್ಷವನ್ನು ತೊರೆದು ಮಾತುಕತೆಗೆ ಮುಂದಾಗಬೇಕು ಎಂದು ಆಂಟೋನಿಯಾ ಗುಟೆರೆಸ್ ಒತ್ತಾಯಿಸಿದ್ದಾರೆ.

<><><>

ಇರಾನ್ ಸಂಘರ್ಷದ ಕಾರಣದಿಂದಾಗಿ ಕಚ್ಚಾ ತೈಲ ಬೆಲೆಗಳು ಗಗನಕ್ಕೇರುತ್ತಿರುವ ಹಿನ್ನೆಲೆಯಲ್ಲಿ ರಷ್ಯಾ ತೈಲ ಆಮದುಗಳ ಮೇಲಿನ ನಿರ್ಬಂಧಗಳನ್ನು ಮತ್ತಷ್ಟು ಸಡಿಲಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ತಿಳಿಸಿದೆ. ಮುಂದಿನ ಒಂದು ತಿಂಗಳ ಅವಧಿಗೆ ರಷ್ಯಾದಿಂದ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ಅನುಮತಿ ನೀಡಲಾಗಿದೆ ಎಂದು ಅಮೆರಿಕ ಹಣಕಾಸು ಇಲಾಖೆ ತಿಳಿಸಿದೆ.

<><><>

ಅಡುಗೆ ಅನಿಲ ಹಾಗೂ ಪೆಟ್ರೋಲ್ ಮತ್ತು ಡೀಸಲ್‌ನಂತಹ ಪೆಟ್ರೋಲಿಯಂ ಉತ್ಪನ್ನಗಳನ್ನು ಮಿತವಾಗಿ ಬಳಸುವಂತೆ ದೇಶದ ನಿವಾಸಿಗಳಿಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಮನವಿ ಮಾಡಿದೆ. ಪ್ರಸ್ತುತ ದೇಶದಲ್ಲಿ ಅಡುಗೆ ಅನಿಲ, ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಸಾಕಷ್ಟಿದೆ. ಆದರೂ ಮಧ್ಯಪ್ರಾಚ್ಯದಲ್ಲಿ ಸಂಘರ್ಷದಿಂದಾಗಿ ಅಲ್ಲಿನ ಪರಿಸ್ಥಿತಿ ಅಸ್ಥಿರವಾಗಿದೆ. ಈ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ಭವಿಷ್ಯದಲ್ಲಿ ಉಂಟಾಗಬಹುದಾದ ಪೂರೈಕೆ ವ್ಯತ್ಯಯಗಳನ್ನು ತಡೆಗಟ್ಟಲು ಸಾರ್ವಜನಿಕರು ಅಡುಗೆ ಅನಿಲ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳನ್ನು ಮಿತವ್ಯಯದಿಂದ ಬಳಸಬೇಕು ಎಂದು ಸಚಿವಾಲಯ ಸಲಹೆ ನೀಡಿದೆ.

<><><>

ಅಫ್ಘಾನಿಸ್ತಾನದ ಕಾಬೂಲ್, ಕಂದಹಾರ್, ಪಕ್ತಿಯಾ, ಪಕ್ತಿಕಾ ಸೇರಿದಂತೆ ಹಲವು ಪ್ರಾಂತ್ಯಗಳ ಮೇಲೆ ಪಾಕಿಸ್ತಾನ ಸೇನೆ ದಾಳಿ ನಡೆಸಿದ್ದು, ಇದರಿಂದಾಗಿ ಮಹಿಳೆಯರು, ಮಕ್ಕಳು ಸೇರಿದಂತೆ ಅನೇಕ ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ತಾಲಿಬಾನ್ ವಕ್ತಾರ ಜಬಿವುಲ್ಲಾ ಮುಜಾಹಿದ್ ತಿಳಿಸಿದ್ದಾರೆ. ಅಫ್ಘಾನಿಸ್ತಾನದ ಕೆಲವು ಸ್ಥಳಗಳಲ್ಲಿ ನಾಗರಿಕರ ಮನೆಗಳನ್ನು ಗುರಿಯಾಗಿಸಿಕೊಂಡು

ಪಾಕಿಸ್ತಾನ ಬಾಂಬ್ ದಾಳಿ ನಡೆಸಿದೆ. ಅಲ್ಲದೆ, ಕಂದಹಾರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಖಾಸಗಿ ವಿಮಾನಯಾನ ಸಂಸ್ಥೆ 'ಕಾಮ್ ಏರ್' ಇಂಧನ ಸಂಗ್ರಹಣ ಘಟಕವನ್ನು ಸ್ಫೋಟಿಸಲಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಜಬಿವುಲ್ಲಾ ಮುಜಾಹಿದ್ ಆರೋಪಿಸಿದ್ದಾರೆ. ಈ ದಾಳಿಗಳು ಅಫ್ಘಾನಿಸ್ತಾನ-ಪಾಕಿಸ್ತಾನ ಗಡಿಯಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸಿದ್ದು, ಇದು ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲಿನ ದಾಳಿ ಎಂದು ತಾಲಿಬಾನ್ ಆಕ್ರೋಶ ವ್ಯಕ್ತಪಡಿಸಿದೆ.

<><><><>

ಮಾದಕದ್ರವ್ಯ ನಿಗ್ರಹ ಸಹಕಾರವನ್ನು ಬಲಪಡಿಸಲು ಕಾರ್ಯಸಾಧ್ಯ ಗುಪ್ತಚರ ಮಾಹಿತಿಯನ್ನು ಹಂಚಿಕೊಳ್ಳುವ ಕುರಿತು ಭಾರತ ಮತ್ತು ಅಮೆರಿಕ ಚರ್ಚೆ ನಡೆಸಿವೆ. ಆಸ್ಟ್ರಿಯಾದ ವಿಯೆನ್ನಾದಲ್ಲಿ ನಡೆದ ೬೯ನೇ ಅಧಿವೇಶನದ ಸಂದರ್ಭದಲ್ಲಿ ರಾಷ್ಟ್ರೀಯ ಮಾದಕದ್ರವ್ಯ ನಿಯಂತ್ರಣ ದಳದ ಮಹಾನಿರ್ದೇಶಕ ಅನುರಾಗ್ ಗರ್ಗ್ ಮತ್ತು ಅಮೆರಿಕದ ರಾಷ್ಟ್ರೀಯ ಔಷಧ ನಿಯಂತ್ರಣ ಕಚೇರಿಯ ನಿರ್ದೇಶಕಿ ಸಾರಾ ಕಾರ್ಟರ್ ನೇತೃತ್ವದ ನಿಯೋಗಗಳು ಮಾತುಕತೆ ನಡೆಸಿವೆ. ಇದೇ ಏಪ್ರಿಲ್‌ನಲ್ಲಿ ಅಮೆರಿಕ-ಭಾರತ ಮಾದಕದ್ರವ್ಯ ನಿಗ್ರಹ ಗುಂಪಿನ ಮೂರನೇ ಸಭೆ ಕರೆಯಲು ಎರಡೂ ಕಡೆಯವರು ನಿರ್ಧರಿಸಿದ್ದಾರೆ.

<><><><>

ಬ್ಯಾಂಕಾಕ್‌ನಲ್ಲಿ ನಡೆದ ೨೦೨೬ರ ವಿಶ್ವ ಬಾಕ್ಸಿಂಗ್ ಫ್ಯೂಚರ್ಸ್ ಕಪ್‌ನ ವಿವಿಧ ವಿಭಾಗಗಳಲ್ಲಿ ಭಾರತದ ಗುಂಜನ್, ರಾಧಾಮಣಿ ಮತ್ತು ಚಂದ್ರಿಕಾ ಪೂಜಾರಿ ಜಯ ಸಾಧಿಸಿದ್ದಾರೆ. ಪೋಲೆಂಡ್‌ನ ಕುಸ್ತಿಪಟು ವಿರುದ್ಧ ಗುಂಜನ್ ೫-೦ ಅಂತರದಿಂದ ಭರ್ಜರಿ ಗೆಲುವು ದಾಖಲಿಸಿದರು. ಇದೇ ವೇಳೆ ಮೊದಲ ಸುತ್ತಿನಲ್ಲಿ ರಾಧಾಮಣಿ ತನ್ನ ಎದುರಾಳಿ ಈಕ್ವೆಡಾರ್‌ನ ಕುಸ್ತಿಪಟುವನ್ನು ಪರಾಭವಗೊಳಿಸಿದರು. ಆದರೆ, ಪುರುಷರ ೭೦ ಕೆ.ಜಿ. ವಿಭಾಗದಲ್ಲಿ ಮೊರಾಕೊ ಸ್ಪರ್ಧಿ ವಿರುದ್ಧ ೫-೦ ಅಂತರದಿಂದ ಪ್ರಿಯಾಂಶ್ ಸೆಹ್ರಾವತ್ ಸೋತರು. ಮಹಿಳೆಯರ ೫೦ ಕೆಜಿ ವಿಭಾಗದಲ್ಲಿ ಚಂದ್ರಿಕಾ ಪೂಜಾರಿ ಅವರು, ಅಮೆರಿಕದ ತಮ್ಮ ಎದುರಾಳಿ ವಿರುದ್ಧ ಪ್ರಬಲ ಪ್ರದರ್ಶನ ನೀಡಿದ್ದು, ೫-೦ ಅಂತರದಿಂದ ವಿಜೇತರಾದರು.

<><><><>

ಯಾಂಗೊನ್‌ನ ತುವನ್ನಾ ಕ್ರೀಡಾಂಗಣದಲ್ಲಿ ನಡೆದ ಎರಡು ಅಂತಾರಾಷ್ಟ್ರೀಯ ಸೌಹಾರ್ದ ಫುಟ್ಬಾಲ್ ಪಂದ್ಯಗಳ ಪೈಕಿ ಮೊದಲನೆಯದರಲ್ಲಿ ಭಾರತದ ೧೭ ವರ್ಷದೊಳಗಿನ ಮಹಿಳಾ ತಂಡ, ಮ್ಯಾನ್ಮಾರ್ ವಿರುದ್ಧ ೨-೦ ಗೋಲುಗಳಿಂದ ಜಯ ಗಳಿಸಿದೆ. ಭಾರತದ ಪರ ಪ್ರೀತಿಕಾ ಬರ್ಮನ್ ಅವರು ಎರಡೂ ಗೋಲುಗಳನ್ನು ಗಳಿಸಿದರು. ಈ ಸೌಹಾರ್ದ ಪಂದ್ಯಗಳು, ಮೇ ೧ ರಿಂದ ಮೇ ೧೭ ರವರೆಗೆ ಚೀನಾದ ಸುಝೌನಲ್ಲಿ ನಡೆಯಲಿರುವ ಎಎಫ್‌ಸಿ ೧೭ ವರ್ಷದೊಳಗಿನ ಮಹಿಳಾ ಏಷ್ಯನ್ ಕಪ್‌ಗಾಗಿ ಭಾರತದ ಸಿದ್ಧತೆಯ ಭಾಗವಾಗಿವೆ. ಎರಡನೇ ಸೌಹಾರ್ದ ಪಂದ್ಯ ನಾಳೆ ನಡೆಯಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>